ಶ್ರೀ ನಜೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):-

1. ಹೌದು.

2. ಉದ್ಭವಿಸುವುದಿಲ್ಲ.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನಗಳ ಅಭಿವೃದ್ಧಿಗೆ ಬಿಡುಗಡೆಯಾದ ಹಣ

312 (532) ಶ್ರೀ ಜಿ. ರಾಜುಗೌಡ (ಹನೂರು):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವದ್ಧಿಗಾಗಿ ವಿವಿದ ಯೋಜನೆಗಳ ಅಡಿಯಲ್ಲಿ ಎಷ್ಟೆಷ್ಟು ಹಣವನ್ನು ಈ ವರ್ಷದಲ್ಲಿ ಬಿಡುಗಡೆ ಮಾಡಲಾಗಿದೆ?

ಆ) ವಿವಿಧ ಯೋಜನೆಗಳ ಮುಖಾಂತರ ಎಷ್ಟು ಜನರಿಗೆ ಈ ಸವಲತ್ತು ದೊರಕಿದೆ?

ಇ) ಕಳೆದ ವರ್ಷ ಎಷ್ಟು ಹಣ ಮೇಲ್ಕಂಡ ಯೋಜನೆಗಳಿಂದ ಖರ್ಚಾಗದೇ ಉಳಿದಿದೆ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):-

ಅ)

		ಲಕ್ಷ ರೂ.ಗಳಲ್ಲಿ
1)	ಇಲಾಖಾ ಕಾರ್ಯಕ್ರಮಗಳು (ಯೋಜನೆ ಮತ್ತು ಯೋಜನೇತರ)	2,348.00
2)	ವಿಶೇಷ ಘಟಕ ಯೋಜನೆ	5,702.29
3)	ಗಿರಿಜನ ಉಪ ಯೋಜನೆ	1,831.56

ಆ)

		ಫಲಾನುಭವಿಗಳು
1)	ಇಲಾಖಾ ಕಾರ್ಯಕ್ರಮಗಳು (ಯೋಜನೆ ಮತ್ತು ಯೋಜನೇತರ)	3,48,954
2)	ವಿಶೇಷ ಘಟಕ ಯೋಜನೆ.	1,21,355
3)	ಗಿರಿಜನ ಉಪ ಯೋಜನೆ.	5,209
	ಒಟ್ಟು	4,75,518

ಇ) ಇಲಾಖಾ ಕಾರ್ಯಕ್ರಮದಲ್ಲಿ 393.59 ಲಕ್ಷ ರೂ. ಗಳು ಖರ್ಚಾಗದೆ ಉಳಿದಿದೆ.

ವಿಶೇಷ ಘಟಕ ಯೋಜನೆಯ ರಾಜ್ಯ ಯೋಜನೆಯ ಡಿಯಲ್ಲಿ 8,914,29 ಲಕ್ಷ ರೂ.ಗಳನ್ನು ಒದಗಿಸುವ ಅಂದಾಜಿನಲ್ಲಿ 8,752,17 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದು, ಉಳಿದ 162.10 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಬೇಕಾಗಿದೆ.

ಗಿರಿಜನ ಉಪ ಯೋಜನೆಯಡಿಯಲ್ಲಿ ಒಟ್ಟು 1258.36 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದ್ದು ಇದರಲ್ಲಿ ಬಾಕಿ ಹಣ ಯಾವುದೂ ಉಳಿದಿರುವುದಿಲ್ಲ.

ರಾಜ್ಯದ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳು

313 (535) ಶ್ರೀ ಜಿ. ರಾಜುಗೌಡ (ಹನೂರು):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದ ಆಸ್ಪತ್ರೆಗಳಲ್ಲಿ ಹುದ್ದೆಗಳು ಎಷ್ಟು ಖಾಲಿ ಇವೆ? ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಆ) ಸಮವಸ್ತ್ರ ಭತ್ಯೆ ಏರಿಕೆ ಬಗ್ಗೆ ಸರ್ಕಾರದ ಕ್ರಮವೇನು?

ಇ) ಶುಶ್ರೂಶಾ ನಿರ್ದೇಶನಾಲಯದ ಸ್ಥಾಪನೆಗೆ 1987 ರಲ್ಲಿ ಮಂಜೂರಾತಿ ನೀಡಿದ್ದರೂ ಇದುವರೆವಿಗೂ ಪ್ರಾರಂಭಿಸದಿರುವುದಕ್ಕೆ ಕಾರಣವೇನು?

ಈ) ಆಗತ್ಯ ಸೇವಾ ಕ್ಷೇತ್ರದಲ್ಲಿರುವ ಸಿಬ್ಬಂದಿ ಮತ್ತು ಅಧಿಕಾರಿಗಳು ಮುಷ್ಕರ ಹೂಡಬಾರದೆಂಬ ನಿಯಮಗಳು ರಚಿಸುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ವಿವಿಧ ವರ್ಗಗಳ ಒಟ್ಟು 6676 ಹುದ್ದೆಗಳು ಖಾಲಿ ಇವೆ. ಈಗ ಇಲಾಖಾ ನೇರ ನೇಮಕಾತಿ ಸಮಿತಿ ರಚಿಸಲಾಗಿದ್ದು ಆಯ್ಕೆ ಹೊಂದಿದ ಅಭ್ಯರ್ಥಿಗಳ ಪಟ್ಟಿ ಬಂದ ಕೂಡಲೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಆ) ಸರ್ಕಾರಿ ಆದೇಶ ಸಂಖ್ಯೆ ಹೆಚ್.ಎಫ್.ಡಬ್ಲೂ. 442 ಎಂ.ಎಸ್.ಎನ್. 91 ದಿ. 26-10-1991 ರಲ್ಲಿ ಈಗಾಗಲೇ ಶುಶ್ರೂತ ಸಿಬ್ಬಂದಿಯವರಿಗೆ ಸಮವಸ್ತ್ರ ಭತ್ಯೆ ಹೆಚ್ಚಿಸಲಾಗಿದೆ.

ಇ) ಸರ್ಕಾರ ಈ ವಿಷಯವನ್ನು ಪುನಃ ಪರಿಶೀಲಿಸಲು ನಿವೃತ್ತ ಮುಖ್ಯ ಕಾರ್ಯದರ್ಶಿ ಶ್ರೀ ನರಸಿಂಹರಾವ್ ಇವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯು ಸಲ್ಲಿಸಿರುವ ವರದಿಯಲ್ಲಿ ಪ್ರತ್ಯೇಕ ಶುಶ್ರೂಷಾ ನಿರ್ದೇಶನಾಲಯ ಸ್ಥಾಪಿಸುವ ಅವಶ್ಯಕತೆ ಇಲ್ಲವೆಂದು ಅದು ಬದಲಾಗಿ 3 ಸಹಾಯಕ ಶುಶ್ರೂಷಾ ನಿರ್ದೇಶಕರ ಹುದ್ದೆಗಳನ್ನು ಸೃಷ್ಟಿಸಿ ಸುವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಿಕೊಂಡು ಹೋಗಬಹುದೆಂದು ಅಭಿಪ್ರಾಯ ಪಡಲಾಗಿದೆ. ನರಸಿಂಹರಾವ್ ಸಮಿತಿಯ ಶಿಪಾರಸುಗಳು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಈ) ಕರ್ನಾಟಕ ರಾಜ್ಯ ಸರ್ಕಾರಿ ಸೇವಾ (ಮುಷ್ಕರ ನಿರೋಧ) ಅಧಿನಿಯಮ 1960ನ್ನು ಚಾಲನೆಗೊಳಿಸಿ ಕ್ರಮ ತೆಗೆದುಕೊಳ್ಳಲು ಬರುತ್ತದೆ.

ರಾಜ್ಯದಲ್ಲಿರುವ ಕೈಗಾರಿಕೆಗಳಿಗೆ ಕನಿಷ್ಠ ವೇತನ ಕಾಯಿದೆ

314 (522) ಶ್ರೀ ಬಿ. ರಾಜುಗೌಡ (ಹನೂರು):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದಲ್ಲಿ ಯಾವ ಯಾವ ಕೈಗಾರಿಕೆಗಳು ಕನಿಷ್ಠ ವೇತನ ಕಾಯ್ದೆ **ವ್ಯಾಪ್ತಿಗೊಳಪಡುತ್ತವೆ**?

ಆ) ರಾಜ್ಯದ ಎಷ್ಟು ಜನ ಕೃಷಿ ಕಾರ್ಮಿಕರು ಈ ಕಾಯ್ದೆಗೆ ಒಳಪಡುತ್ತಾರೆ.?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):-

ಅ) ಈ ಕೆಳಕಂಡ 64 ಉದ್ಯಮಗಳು ಕನಿಷ್ಠ ವೇತನ ಕಾಯ್ದೆ ವ್ಯಾಪ್ತಿಗೊಳಪಡುತ್ತವೆ.

1. ಶಾಪ್ಸ್ ಆಂಡ್ ಕಮರ್ಷಿಯಲ್ ಎಸ್ಟಾಬ್ಲಿಷ್‌ಮೆಂಟ್ಸ್.
2. ರೆಸಿಡೆನ್ಷಿಯಲ್ ಹೋಟೆಲ್ ಅಂಡ್ ಈಟಿಂಗ್ ಹೌಸಸ್
3. ಇಂಜಿನಿಯರಿಂಗ್ ಇಂಡಸ್ಟ್ರೀ.
4. ಟೈಲರಿಂಗ್ ಇಂಡಸ್ಟ್ರೀ.
5. ದಿ ಕನ್ಸಟ್ರಕ್ಷನ್ ಆಫ್ ಮೈನ್‌ಟೆನೆನ್ಸ್ ಆಫ್ ರೋಡ್ ಆರ್ ಬಿಲ್ಡಿಂಗ್ ಆಪರೇಷನ್ಸ್.
6. ಪ್ರಿಂಟಿಂಗ್ ಪ್ರೆಸ್.
7. ಫಿಲಂ ಇಂಡಸ್ಟ್ರೀ.
8. ಅಗರಬತ್ತಿ ಇಂಡಸ್ಟ್ರೀ.
9. ಟೊಬ್ಯಾಕೋ (ಇನ್‌ಕ್ಲೂಡಿಂಗ್ ಬೀಡಿ ಮೇಕಿಂಗ್) ಇಂಡಸ್ಟ್ರೀ.
10. ಪಬ್ಲಿಕ್ ಮೋಟಾರ್ ಟ್ರಾನ್ಸಪೋರ್ಟ್.
11. ಹಾಸ್ಪಿಟಲ್ಸ್ ಆಂಡ್ ನರ್ಸಿಂಗ್ ಹೋಮ್ಸ್.
12. ಕ್ಲಬ್ಸ್.
13. ಬೇಕರೀಸ್.
14. ಕನ್‌ಫೆಕ್ಷನರಿಸ್.